<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.</u>

## <u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1013 /2021</u> .

ಪ್ರಾ.ಸಾ. : 3

ಚಾ.ಸಾ. : 3

ಹೆಸರು : ಜಯಶ್ರೀ
ತಂದೆಯ ಹೆಸರು : ರಮೇಶ್
ವಯಸ್ಸು : 25 ವರ್ಷ
ಉದ್ಯೋಗ : ಖಾಸಗಿ
ವಿಳಾಸ : ಗೋಣಿಕೊಪ್ಪ

... ........................................................................................................... ...

ದಿನಾಂಕ 13 ನೇ ಡಿಸೆಂಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ</u> : -

ಆರೋಪಿ 1 ಪರಿಚಯ. ಆರೋಪಿ 2 ಪರಿಚಯವಿಲ್ಲ. ಚಾಸಾ 1, 2, 3, ಪರಿಚಯ. ಅವರು ನಮ್ಮ ಜೊತೆ ಕೆಲಸ ಮಾಡುತ್ತಿದ್ದರು. ನಾನು 2021 ರಲ್ಲಿ ಗೋಣಿಕೊಪ್ಪ ಅಪೊಲೋ Formacy ಯಲ್ಲಿ ಕೆಲಸ ಮಾಡಿದ್ದೆ. ಸದರಿ Formacy ಯನ್ನು ಬೆ. 7 ರಿಂದ ರಾತ್ರಿ 10.30 ಗಂಟೆ ತನಕ ತೆಗೆಯಲಾಗಿತ್ತು ಎನ್ನುತ್ತಾರೆ. ನಾವು ಪ್ರತಿದಿನ ವ್ಯಾಪಾರದಿಂದ ಬಂದ ಹಣವನ್ನು ಅಂಗಡಿಯ ಕ್ಯಾಶ್ ಢ್ರಾಯರ್ ನಲ್ಲಿ ಇಡುತ್ತಿದ್ದೆವು ಮರದಿನ ಬ್ಯಾಂಕ್‌ಗೆ ಕಟ್ಟುತ್ತಿದ್ದೆವು. ದಿ. 09.05.2021 ರಂದು ಚಾಸಾ 1 ರವರು ರಾತ್ರಿ ಅಂಗಡಿಯ ಬಾಗಿಲು ಹಾಕಿ ನಾನು ಮತ್ತು ಚಾಸಾ 1 ರವರು ಬೆಳಿಗ್ಗೆ ಬಂದು ಅಂಗಡಿ ತೆರೆದು ನೋಡಿದಾಗ ಕ್ಯಾಶ್ ಡ್ರಾಯರ್ ನಲ್ಲಿ ಹಣ ಇರಲಿಲ್ಲ. ಆಗ ಚಾಸಾ 1 ಸದರಿ ವಿಚಾರವನ್ನು ನನಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ಅಂಗಡಿಯಲ್ಲಿದ್ದ ಸಿ.ಸಿ. ಕ್ಯಾಮೆರಾವನ್ನು ಪರಿಶೀಲಿಸಿದಾಗ ವಿರುಪಾಕ್ಷ ಮತ್ತು ಮತ್ತೊಬ್ಬರು ದಿನಾಂಕ 09.05.2021 ರಂದು ಬೆಳಿಗಿನ ಜಾವ 5 ರಿಂದ 5.30 ರ ವೇಳೆಗೆ ಅಂಗಡಿಗೆ ಬಂದು ಹಣ ಕಳ್ಳತನ ಮಾಡಿರುವುದು ಕಂಡು ಬಂತು. ಆನಂತರ ಗೋಣಿಕೊಪ್ಪ ಪೊ. ಠಾಣೆಗೆ ದೂರು ನೀಡಿದೆವು. ಅಂಗಡಿಯಲ್ಲಿ ರೂ. 68,000/- ಹಣ, ಮೆಡಿಸಿನ್, ಇಂಜಕ್ಷನ್ ಹಾಗೂ ಸಿ.ಸಿ. ಟಿ. ವಿ ಮೋಡಮ್ ಕಳ್ಳತನ ಆಗಿರುವುದು ಕಂಡು ಬಂತು.

ಪೊಲೀಸರು ಬಂದು ಪರಿಶೀಲಿಸಿದರು. ಸಿ.ಸಿ. ಟಿ. ವಿ. ಫೋಟೋವನ್ನು ನೋಡಿದರು ನಾನೇ ಸದರಿ ಫೋಟೋಗಳನ್ನು ಪೆನ್ ಡ್ರೈವ್ ಗೆ ಹಾಕಿ ಪೊಲೀಸರಿಗೆ ನೀಡಿರುತ್ತೇನೆ. ಈ ಬಗ್ಗೆ ಪ್ರಮಾಣ ಪತ್ರ ನೀಡಿರುತ್ತೇನೆ.. ಕಲಂ 65 ಬಿ ಭಾರತೀಯ ಸಾಕ್ಷ್ಯ ಅಧಿನಿಯಮದಡಿಯಲ್ಲಿ ನೀಡಿದ ಪ್ರಮಾಣ ಪತ್ರವನ್ನು ನಿ ಪಿ 9 ಎ ಎಂದು ಸಾಕ್ಷಿ ಸಹಿಯನ್ನು 9 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

<u>ಪಾಟೀ ಸವಾಲು: - ಮಾನ್ಯ ಸ ಸ ಅ ರವರಿಂದ</u> : -

ದಿ. 09.05.2021 ರಂದು ಸಹ ನಾನು ಮತ್ತು ಚಾಸಾ 1 ಇಡೀ ದಿನ ವ್ಯಾಪಾರ ಮಾಡಿ ಬಂದಿದ್ದ ರೂ. 68,000/- ಹಣವನ್ನು ಕ್ಯಾಶ್ ಡ್ರಾಯರ್‌ನಲ್ಲಿ ಇಟ್ಟು ಹೋಗಿದ್ದೇನೆ ಎಂದರೆ ಸರಿ. ಮರುದಿನ ದಿ. 10.05.2021 ರಂದು ಚಾಸಾ 1 ರವರು ಅಂಗಡಿ ಬಾಗಿಲು ತೆಗೆದೆ ಎಂದರೆ ಸರಿ. ಆಗ ಕ್ಯಾಶ್ ಡ್ರಾಯರ್‌ನಲ್ಲಿ ಇದ್ದ ಹಣ ಕಾಣಲಿಲ್ಲ ಎಂದರೆ ಸರಿ. ಸಿ. ಸಿ. ಟಿ. ವಿ ಪರಿಶೀಲಿಸಿದಾಗ ದಿನಾಂಕ 10.05.2021 ರಂದು ಬೆಳಗಿನ ಜಾವ 5 ರಿಂದ 5.30 ರವರ ಸಮಯದಲ್ಲಿ ಒಬ್ಬ ವ್ಯಕ್ತಿ ಆತನ ಬಳಿ ಇದ್ದ ಕೀಯಿಂದ ಅಂಗಡಿ ಬಾಗಿಲನ್ನು ತೆಗೆದು ಆತ ಮತ್ತು ಮತ್ತೊಬ್ಬ ಇಬ್ಬರು ಒಳಗಡೆ ಹೋಗಿ ಹಣ ತೆಗೆದುಕೊಂಡು ಹೋಗಿದ್ದಾರೆ ಎಂದು ತಿಳಿಯಿತು ಎಂದರೆ ಸರಿ. ಸದರಿ ವ್ಯಕ್ತಿ ನಮ್ಮ ಅಂಗಡಿಯಲ್ಲಿ ಹಿಂದೆ ಕೆಲಸ ಮಾಡಿದ್ದ ವಿರೂಪಾಕ್ಷ ಎಂದು ನನಗೆ ತಿಳಿಯಿತು ಎಂದರೆ ಸರಿ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ 1 ಮೃತರಾಗಿರುತ್ತಾರೆ. ಆರೋಪಿ 2 ರವರನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎನ್ನುತ್ತಾರೆ. ಮು. ಮಾ ಗಳನ್ನು ನೋಡಿ ಗುರುತಿಸಿರುತ್ತಾರೆ. 09.05.2021 ರ ಹಣ ಕಳ್ಳತನ ಆಗಿದ್ದ ಕಾರಣ ನಾವು ಘಟನಾ ದಿನಾಂಕವನ್ನು 09.05.2021 ಎಂದು confuse ಆಗಿ ಹೇಳಿದ್ದೇನೆ ಎಂದರೆ ಸರಿ.

<u>ಪಾಟೀ ಸವಾಲು</u> :- ಅರೋಪಿ ಪರ ವಕೀಲರವರಿಂದ :-

ನಾನು 4 ವರೆ ವರ್ಷದಿಂದ ಅಪ್ಪೊಲೋ Formacy ಯಲ್ಲಿ ಕೆಲಸ ಮಾಡಿತ್ತಿದ್ದೇನೆ. ಆಗ ವಿರೂಪಾಕ್ಷ ಸಹ ಕೆಲಸ ನಮ್ಮ ಜೊತೆ ಕೆಲಸ ಮಾಡುತ್ತಿದ್ದರು ಘಟನೆಗೆ ಹಿಂದೆ ವಿರೂಪಾಕ್ಷ ಯಾವಾಗ ಕೆಲಸ ಬಿಟ್ಟಿದ್ದರು ಎಂದು ಈಗ ನೆನಪಿಲ್ಲ. ನಾವು ಲಿಖಿತವಾಗಿ ಯಾವುದೇ ದಾಖಲಾತಿಯನ್ನು ನೀಡಿ ವಿರೂಪಾಕ್ಷರವರನ್ನು ಕೆಲಸದಿಂದ ತೆಗೆಯಲಿಲ್ಲ. ನಾನು ಪ್ರತಿದಿನ 10 ಗಂಟೆಗೆ ಅಂಗಡಿಗೆ ಬರುತ್ತೇನೆ. ಭಾನುವಾರವು ಅಂಗಡಿ ಇರುತ್ತದೆ ನಾನು ಬರುವುದಿಲ್ಲ ಎನ್ನುತ್ತಾರೆ .ನಾನು ಆದಿನ ಎಷ್ಟು ಸಮಯಕ್ಕೆ ಅಂಗಡಿಗೆ ಬಂದೆ ಎಂದು ನೆನಪಿಲ್ಲ. ಆದಿನ ಚಾಸಾ 1 ಅಂಗಡಿ ಬಾಗಿಲನ್ನು ಬೆ. 7 ಗಂಟೆಗೆ ತೆಗೆದಿರುತ್ತಾರೆ. ದಿ. 10.05.2021 ರಂದು ಘಟನೆ ಬಗ್ಗೆ ತಿಳಿಯಿತು ಎನ್ನುತ್ತಾರೆ. . ಸಿ.ಸಿ. ಕ್ಯಾಮೆರಾ ನೋಡಿದಾಗ ವಿರೂಪಾಕ್ಷರವರ ಮುಖ ತಿಳಿಯಿತು ಮತ್ತೊಬ್ಬರು ಮುಖ ತಿಳಿಯಲಿಲ್ಲ. ಸಂಜೆ ಪೊ. ಠಾಣೆಗೆ ಹೋದೆವು, ಮರುದಿನ ಪೊಲೀಸರು ವಿರೂಪಾಕ್ಷರವರನ್ನು ಕರೆದುಕೊಂಡು ಬಂದಿದ್ದರು, ಬೇರೆ ಯಾರನ್ನು ನೋಡಲಿಲ್ಲ. ಕಳ್ಳತನ ಮಾಡಿದ್ದಾರೆ ಎಂದು ಹೇಳುವ ವ್ಯಕ್ತಿ ವಿರೂಪಾಕ್ಷರವರು ಎಂದರೆ ಸರಿ. ಅಂಗಡಿ ಮತ್ತು ಲಾಕರ್ ನ ಬೀಗ ಮುರಿದಿಲ್ಲ ಎಂದರೆ ಸರಿ. ಒಂದು ಜೊತೆ ಕೀ ನನ್ನ ಬಳಿ ಇತ್ತು ಮತ್ತೊಂದು ಕೀ ಚಾಸಾ 1 ರವರ ಬಳಿ ಇತ್ತು ಎನ್ನುತ್ತಾರೆ. ಕೀ ಚಾಸಾ 1 ರವರ ಬಳಿ ಇದ್ದ ಕಾರಣ ಹಣದ ಬಗ್ಗೆ ಚಾಸಾ 1 ರವರಿಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಾನು ಮ್ಯಾನೇಜರ್ ಗೆ ತಿಳಿಸುವ ಸಲುವಾಗಿ ತಡವಾಯಿತು ಎನ್ನುತ್ತಾರೆ. ನಾನು ಅಂಗಡಿಯಲ್ಲಿ ಸಹಿ ಹಾಕಿದ್ದೇನೆ, ಬರವಣಿಗೆ ಮಾಡಲಾಗಿತ್ತು ಎನ್ನುತ್ತಾರೆ. ನಾವು ದೂರು ನೀಡಿದ ಮರುದಿನ ಪೊಲೀಸರು ಅಂಗಡಿಗೆ ಬಂದಿದ್ದರು. ಆರೋಪಿ 2 ರವರಿಗೂ ಕಳ್ಳತನಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅವರು ಸಹ ಜೊತೆಯಲ್ಲಿ ಬಂದಿದ್ದರು ಎನ್ನುತ್ತಾರೆ. ಆರೋಪಿ 2 ರವರನ್ನು ಪೊ. ಠಾಣೆ ಯಲ್ಲಿ ನೋಡಿರುವುದಿಲ್ಲ. ಆರೋಪಿ 2 ರವರಿಗೂ, ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ</u> :- - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)